
# ||ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯಃ ||



Tracking:

| Sr | Date | Particulars | By |
|---|---|---|---|
| 1 | 30/04/2013 | **Typing Started on** | **H K Srinivasa Rao** |
| 2 | 30/04/2013 | **Typing Ended on** | **H K Srinivasa Rao** |
| 3 | 30/04/2013 | **First Proof Reading** | **M S Venugopal** |
| 4 | 30/04/2013 | **II proof Correction** | **Narahari Rattihalli** |
| | | | |

# || SRI HAYAVADANA RANGAVITTALA GOPINATHAYA NAMAHA ||

*Blessed by Lord and with His divine grace, we are pleased to publish this Magnanimous Work of Sri Jagannatha Dasaru. It is a humble effort to make available this Great work to Sadhakas who are interested in the noble path of propagating Acharya Madhwa's Philosophy.*

*With great humility, we solicit the readers to bring to our notice any inadvertant typographical mistakes that could have crept in, despite great care. We would be pleased to incorporate such corrections in the next versions. Users can contact us, for editable version, to facilitate any value additions.*

*Contact: H K SRINIVASA RAO, N0 26, 2ND FLOOR, 15TH CROSS, NEAR VIDHYAPEETA CIRCLE, ASHOKANAGAR, BANGALORE 560050. PH NO. 26615951, 9901971176, 8095551774, Email : srkarc@gmail.com*

## ಕೃತಜ್ಞತೆಗಳು



ಜನ್ಮಾಂತರದ ಸುಕೃತದ ಫಲವಾಗಿ ಮಧ್ವಮತದಲ್ಲಿ ಜನಿಸಲು, ಪ್ರೇಮಮೂರ್ತಿಗಳಾಗಿ ನನ್ನ ಅಸ್ತಿತ್ವಕ್ಕೆ ಕಾರಣರಾದ, ಈ ಸಾಧನೆಗೆ ಅವಕಾಶಮಾಡಿದ, ನನ್ನ ಪೂಜ್ಯ ಮಾತಾ ಪಿತೃಗಳಾದ, ದಿವಂಗತರಾದ ಲಲಿತಮ್ಮ ಮತ್ತು ಕೃಷ್ಣರಾವ್ ಹೆಚ್ ಆರ್ ಅವರ ಸವಿ ನೆನಪಿನಲ್ಲಿ ಈ ಜ್ಞಾನ ಯಜ್ಞ"

"ಮಾತೃದೇವೋ ಭವ - ಪಿತೃದೇವೋ ಭವ ಆಚಾರ್ಯದೇವೋಭವ"

ಗ್ರಂಥ ಋಣ: ಶ್ರೀಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ – ಸುಬೋಧ ಎಂ ರಾಮರಾವ್.

# ಫಲವಿದು ಬಾಳ್ದುದಕೆ

## ರಾಗ - ಪಂತುವರಾಳಿ ॥ ತಾಳ - ಆದಿತಾಳ

ಫಲವಿದು ಬಾಳ್ದುದಕೆ ಸಿರಿ। ನಿಲಯನ ಗುಣಗಳ ತಿಳಿದು
ಭಜಿಸುವುದೆ। ಫಲವಿದು ಬಾಳ್ದುದಕೆ ॥ಪಲ್ಲವಿ॥

ಸ್ವೋಚಿತ ಕರ್ಮಗಳಾಚರಿಸುತ ಬಲು । ನೀಚರಲ್ಲಿ ಪೋಗಿ ಯಾಚಿಸದೆ॥
ಖೇಚರವಾಹನ ಚರಾಚರ ಬಂಧಕ। ಮೋಚಕನಹುದೆಂದ್ಯೋಚಿಸುತಿಪ್ಪುದೆ॥ 1 ॥ ...

ನಿಚ್ಚ ಸುಭಕುತಿಯೊಳಚ್ಯುತನಂಘ್ರಿಗ। ಳರ್ಚಿಸಿ ಮೆಚ್ಚಿಸುತೆಚ್ಚರದಿ॥
ತುಚ್ಚ ವಿಷಯಗಳನಿಚ್ಛೈಸದೆ ಯ। ದೃಚ್ಛಾಲಾಭದಿಂಪ್ರೋಚ್ಚನಾಗುವುದೆ ॥ 2 ॥ ...

ಮನೋವಾಕ್ಕಾಯದೊಳನುಭವಿಸುವ ದಿನ। ದಿನದ ವಿಷಯ ಸಾಧನಗಳನೂ॥
ಅನಿಲಾಂತರ್ಗತ ವನರುಹದಳಲೋ| ಚನಗರ್ಪಿಸಿ ದಾಸನು ನಾನೆಂಬುದೆ ॥ 3 ॥ ....

ವಾಸವಮುಖ ವಿಬುಧಾಸುರ ನಿಚಯಕೆ| ವಾಸುದೇವನೆ ಶುಭಾಶುಭದ॥
ಈ ಸಮಸ್ತ ಜಗಕೀಶ ಕೇಶವಾ। ನೀಶ ಜೀವರೆಂಬೀ ಸುಜ್ಞಾನವೆ॥ 4 ॥ ...

ಪಂಚಋತುಗಳಲಿ ಪಂಚಾಗ್ನಿಗಳಲಿ ಪಂಚಪಂಚರೂಪವ ತಿಳಿದು॥
ಪಂಚಸುಸಂಸ್ಕಾರಾಂಚಿತನಾಗಿ ದ್ವಿಪಂಚಕರಣದಲಿ ಪಂಚಕವರಿವುದೆ॥ 5 ॥ ...

ಪಂಚಭೇದ ಪ್ರಪಂಚ ಸುಸತ್ಯ ವಿ। ರಿಂಚಿಮುಖರು ಬಲಿ ವಂಚಕಗೆ॥
ಚಂಚಲ ಪ್ರತಿಮೆ ಅಚಂಚಲ ಪ್ರಕೃತಿಯು। ಸಂಚಿಂತಿಸಿ ಮುದಲಾಂಛಿತನಾಹುದೆ ॥ 6 ॥ ...

ಹೃದಯದಿ ರೂಪವು ವದನದಿ ನಾಮವು। ಉದರದಿ ನೈವೇದ್ಯವು ಶಿರದಿ॥
ಪದಜಲ ನಿರ್ಮಾಲ್ಯವನೆ ಧರಿಸಿ ಕೋ। ವಿದರ ಸದನ ಹೆಗ್ಗದವ ಕಾಯ್ದುದೆ॥ 7 ॥ ...

ಪಾತ್ರರ ಸಂಗಡ ಯಾತ್ರೆಯ ಚರಿಸಿ ವಿ। ಧಾತೃಪಿತನ ಗುಣಸ್ತೋತ್ರಗಳ॥

ಶ್ರೋತ್ರದಿ ಸವಿದು ವಿಚಿತ್ರಾನಂದದಿ। ಗಾತ್ರವ ಮರೆದು ಪರತ್ರವ ಪಡೆವುದೆ॥ 8 ॥ ...

ಹಂಸಮೊದಲು ಹದಿನೆಂಟುರೂಪಗಳ। ಸಂಸ್ಥಾನವ ತಿಳಿದನುದಿನದಿ॥

ಸಂಸೇವಿಸುವ ಮಹಾಪುರುಷರ ಪದ। ಪಾಂಸವ ಧರಿಸಿ ಅಸಂಶಯನಾಹುದೆ॥ 9 ॥ ...

ವರಗಾಯತ್ರೀನಾಮಕ ಹರಿಗೀ।ರೆರಡಂಘ್ರಿಗಳ ವಿವರವ ತಿಳಿದು॥

ತರುವಾಯದಿ ಷಡ್ವಿಧರೂಪವ ಸಾದರದಲಿ ಧೇನಿಸಿ ನಿರುತ ಜಪಿಸುವುದೆ॥ 10 ॥ ...

ಬಿಗಿದಕಂಠದಿಂ ದೃಗ್ಬಾಷ್ಪಗಳಿಂ। ನಗೆಮೊಗದಿಂ ರೋಮಗಳೊಗೆದು॥

ಮಿಗೆ ಸಂತೋಷದಿ ನೆಗೆದಾಡುತ ನಾ। ಲ್ಮೊಗನಯ್ಯನ ಗುಣ ಪೊಗಳಿ ಹಿಗ್ಗುವುದೆ॥ 11 ॥...

ಗೃಹಕರ್ಮವ ಬ್ಯಾಸರದಲೆ ಪರಮೋ। ತ್ಸಾಹದಲಿ ಮಾಡುತ ಮೂಜಗದ॥

ಮಹಿತನ ಸೇವೆಯಿದೆನುತಲಿ ಮೋದದಿ। ಅಹರಹರ್ಮನದಿ ಸಮರ್ಪಿಸುತಿಪ್ಪುದೆ॥ 12 ॥...

ಕ್ಲೇಶಾನಂದಗಳೀಶಾಧೀನ ಸ। ಮಾಸಮ ಬ್ರಹ್ಮಸದಾಶಿವರು॥

ಈಶಿತವ್ಯರು ಪರೇಶನಲ್ಲದೆ। ಶ್ವಾಸ ಬಿಡುವ ಶಕ್ತಿಲೇಶವಿಲ್ಲೆಂಬುದೆ॥ 13 ॥ ...

ಆ ಪರಮಾತ್ಮಗೆ ರೂಪದ್ವಯವು ಪ। ರಾಪರ ತತ್ವಗಳಿದರೊಳಗೆ॥

ಸ್ತ್ರೀಪುಂ ಭೇದದಿ ಈ ಪದ್ಮಜಾಂಡವ। ವ್ಯಾಪಿಸಿ ಇಹನೆಂದೀಪರಿ ತಿಳಿವುದೆ॥ 14 ॥ ...

ಏಕೋತ್ತರ ಪಂಚಾಶದ್ವರ್ಣಗ। ಳೇಕಾತ್ಮನ ನಾಮಂಗಳಿವು॥

ಮಾಕಮಲಾಸನ ಮೊದಲಾದಮರರು। ಸಾಕಲ್ಯದಿ ಇವನರಿಯರೆಂಬುದೆ॥ 15 ॥...

ಒಂದುರೂಪದೊಳನಂತ ರೂಪಗಳು। ಪೊಂದಿಪ್ಪವು ಗುಣಗಣಸಹಿತ॥

ಹಿಂದು ಮುಂದೆ ಎಂದೆಂದಿಗು ಶ್ರೀಗೋ। ವಿಂದಗೆ ಸರಿಮಿಗಿಲಿಲ್ಲೆಂತೆಂಬುದೆ ॥ 16 ॥...

ಹರಿಕಥೆ ಪರಮಾದರದಲಿ ಕೇಳುತ | ಮರೆದು ತನುವ ಸುಖಸುರಿವುತಲೀ ll
ಉರುಗಾಯನ ಸಂದರುಶನ ಹಾರೈ l ಸಿರುಳು ಹಗಲು ಜರಿಜರಿದು ಬಳಲುವದೆ ll 17 ll...

ಮೇದಿನಿ ಪರಮಾಣ್ವಂಬುಕಣಂಗಳ l ನೈದಬಹುದು ಪರಿಗಣನೆಯನು ll
ಮಾಧವನಾನಂದಾದಿ ಗುಣಂಗಳ l ನಾದಿ ಕಾಲದಿಂದಗಣಿತವೆಂಬುದೆ ll 18 ll...

ವಿಷಯೇಂದ್ರಿಯಗಳ ತದಭಿಮಾನಿ ಸುಮ l ನಸರೊಳು ನಿಂದು ನಿಯಾಮಿಸುವ ll
ಶ್ವಸನಾಂತರ್ಗತ ವಾಸುದೇವ ತಾ ವಿಷಯಂಗಳ ಭೋಗಿಸುತಿಹನೆಂಬುದೆ ll 19 ll...

ಮೂಜಗದೊಳಗಿಹ ಭೂ ಜಲ ಖೇಚರ l ಈ ಜೀವರೊಳು ಮಹೌಜಸನ ll
ಸೋಜಿಗ ಬಹುವಿಧ ನೈಜ ವಿಭೂತಿಯ l ಪೂಜಿಸುತನುದಿನ ರಾಜಿಸುತಿಪ್ಪುದೆ ll 20 ll ...

ಗುಣಕಾಲಾಹ್ವಯ ಆಗಮಾರ್ಣವ ಕುಂ l ಭಿಣಿ ಪರಮಾಣ್ವಂಬುಧಿಗಳಲಿ ll
ವನಗಿರಿನದಿಮೊದಲಾದುದರೊಳಗಿಂ l ಧನಗತ ಪಾವಕನಂತಿಹನೆಂಬುದೆ ll 21 ll...

ಅನಲಾಂಗಾರನೊಳಿಪ್ಪೋಪಾದಿಲಿ l ಅನಿರುದ್ಧನು ಚೇತನರೊಳಗೆ ll
ಕ್ಷಣಬಿಟ್ಟಗಲದೆ ಏಕೋ ನಾರಾ l ಯಣಶ್ರುತಿಪ್ರತಿಪಾದ್ಯನು ಇಹನೆಂಬುದೆ ll 22 ll...

ಪಕ್ಷ್ಮಗಳಕ್ಷಿಗಳಗಲದಲಿಪ್ಪಂ l ತಕ್ಷರ ಪುರುಷನಪೇಕ್ಷೆಯಲಿ ll
ಕುಕ್ಷಿಯೊಳಬ್ಜಜತ್ರ್ಯಕ್ಷಾದ್ಯಮರರ l ಈಕ್ಷಿಸಿ ಕರುಣದಿ ರಕ್ಷಿಪನೆಂಬುದೆ ll 23 ll ...

ಪವನಮತಾನುಗರವ ನಾನಹುದೆಂ l ದವನಿಯೊಳಗೆ ಸತ್ಕವಿಜನರ ll
ಭವನಗಳಲಿ ಪ್ರತಿದಿವಸದಿ ಸುಕಥಾ l ಶ್ರವಣಮಾಡುತ ಪ್ರವರನಾಗುವುದೆ ll 24 ll...

ಪ್ರತಿದಿವಸ ಶ್ರುತಿಸ್ಮೃತಿಗಳಿಂದ ಸಂ l ಸ್ತುತಿಸುತ ಲಕ್ಷ್ಮೀಪತಿಗುಣವ ll
ಕೃತಿಪತಿ ಸೃಷ್ಟಿಸ್ಥಿತಿಲಯಕಾರಣ l ಇತರ ದೇವತೆಗಳಿಗಿನಿತಿಲ್ಲೆಂಬುದೆ ll 25 ll

ಕಾರಣ ಕಾರ್ಯಾಂತರ್ಗತ ಅಂಶವ l ತಾರಾವೇಶಾವಿಹಿತ ಸಹಜ ll
ಪ್ರೇರಕ ಪ್ರೇರ್ಯಾಹ್ವಯ ಸರ್ವತ್ರ ವಿ l ಕಾರವಿಲ್ಲದಲೆ ತೋರುವನೆಂಬುದೆ ll 26 ll...

ಪನ್ನಗಾಚಲ ಸನ್ನಿವಾಸ ಪಾ। ವನ್ನಚರಿತ ಸದ್ಗುಣಭರಿತಾ।

ಜನ್ಯಜನಕ ಲಾವಣ್ಯನೇಕ ಜಗನ್ನಾಥವಿಠಲಾನನ್ಯಪನೆಂಬುದೆ ॥ 27 ॥ ...

ಫಲವಿದು ಬಾಳ್ದುದಕೆ ಸಿರಿ। ನಿಲಯನ ಗುಣಗಳ ತಿಳಿದು

ಭಜಿಸುವುದೆ। ಫಲವಿದು ಬಾಳ್ದುದಕೆ ॥ ಪಲ್ಲವಿ ॥